ಕೆ. ನಿರುಪಮಾ

ಒಬ್ಬ ರೈತ ಕುದುರೆ ಮತ್ತು ಆಡೊಂದನ್ನು ಸಾಕುತ್ತಿದ್ದ. ಅವೆರಡೂ ಒಳ್ಳೆಯ ಸ್ನೇಹಿತರು. ಒಮ್ಮೆ ಕುದುರೆಗೆ ಯಾವುದೋ ಸೋಂಕು ಹತ್ತಿತು. ರೈತ, ಪಶುವೈದ್ಯನನ್ನು ಅದರ ಚಿಕಿತ್ಸೆಗಾಗಿ ಕರೆತಂದ.

ಕುದುರೆಯನ್ನು ಪರಿಶೀಲಿಸಿದ ವೈದ್ಯ, 'ನಾನು ಇದಕ್ಕೆ ಮೂರು ದಿನ ಬಂದು ಔಷಧ ಕೊಡುತ್ತೇನೆ. ಅಷ್ಟರಲ್ಲಿ ಇದು ಎದ್ದು ನಡೆದರೆ ಸರಿ. ಇಲ್ಲದಿದ್ದರೆ ಇದನ್ನು ಕೊಂದು ಬಿಡುವುದೇ ಒಳ್ಳೆಯದು' ಎಂದು ತನ್ನ ಅಭಿಪ್ರಾಯ ಹೇಳಿದ.

ಇವರ ಸಂಭಾಷಣೆಯನ್ನು ರೈತ ಸಾಕಿದ ಆಡು ಕೇಳುತ್ತಿತ್ತು. ಮರುದಿನ ವೈದ್ಯರು ಔಷಧಿ ಕೊಟ್ಟು ಹೋದ ಮೇಲೆ ಆಡು ಕುದುರೆಯ ಬಳಿಗೆ ಬಂದು, 'ಗೆಳೆಯಾ! ಎದ್ದು ನಡಿ! ಇಲ್ಲದಿದ್ದರೆ ನಿನ್ನನ್ನು ಕೊಂದು ಬಿಡುತ್ತಾರೆ!' ಎಂದು ಎಚ್ಚರಿಸಿತು.

ಮೂರನೆಯ ದಿನವೂ ವೈದ್ಯ ಕುದುರೆಗೆ ಔಷಧ ಕೊಟ್ಟವನೇ, 'ನಾಳೆ ಈ ಕುದುರೆ ನಡೆಯದಿದ್ದರೆ ಇದನ್ನು ಸಾಯಿಸಿ ಬಿಡಬೇಕು. ಇಲ್ಲದಿದ್ದರೆ ಇದಕ್ಕೆ ಬಂದ ಸೋಂಕಿನಿಂದ ಬೇರೆ ಪ್ರಾಣಿಗಳಿಗೂ ಹಾನಿಯಾಗುತ್ತದೆ' ಎಂದನು.

ಅವನು ಹೋದ ನಂತರ ಆಡು, 'ಗೆಳೆಯಾ! ಹೇಗಾದರೂ ಮಾಡಿ ಎದ್ದು ನಡಿ! ಪ್ರಯತ್ನ ಮಾಡು! ನಿನ್ನಿಂದ ಅದು ಸಾಧ್ಯ; ಏಳು, ಇಲ್ಲದಿದ್ದರೆ ಪ್ರಾಣ ಕಳೆದುಕೊಳ್ಳುತ್ತಿ! ಎದ್ದು ನಡಿ!' ಎಂದು ಪ್ರೋತ್ಸಾಹಿಸಿತು.

ಕುದುರೆಯೂ ಭಯದಿಂದ ಪ್ರಯತ್ನಿಸಿ ಎದ್ದು ನಿಂತಿತು. ರೈತನ ಸಂತೋಷಕ್ಕೆ ಪಾರವೇ ಇಲ್ಲ! ಅವನು ವೈದ್ಯನನ್ನು ಕರೆದು, 'ನನ್ನ ಕುದುರೆಗೆ ಸರಿಹೋಯಿತು! ಇದೊಂದು ಪವಾಡವೇ ಹೌದು! ನಿಮಗೆ ನನ್ನ ಕೃತಜ್ಞತೆ ಸಲ್ಲಿಸಲು ಔತಣ ಕೊಡಬೇಕು. ಈ ನನ್ನ ಆಡನ್ನು ಕಡಿದು ಅಡುಗೆ ಮಾಡಿಸುತ್ತೇನೆ!' ಎಂದನು.

ಇದು ಹೇಗಿದೆ? ಕುದುರೆಯನ್ನು ಗಣಪಡಿಸಿದ್ದು ಆಡಿನ ಸಕಾರಾತ್ಮಕ ನುಡಿಗಳೇ. ಆದರೆ ವೈದ್ಯನ ಔಷಧದಿಂದಲೇ ಅದು ಗುಣವಾಯಿತು ಎಂದು ತಿಳಿದು ಅದನ್ನೇ ಬಲಿ ಕೊಡುತ್ತಾನೆ ರೈತ!

ನಿಜ ಜೀವನದಲ್ಲೂ ಹಲವೊಮ್ಮೆ ಹೀಗೆಯೇ. ಯಾರಿಂದ ಒಳ್ಳೆಯದಾಯಿತೋ ಅವರಿಗಿಂತ ಆ ಒಳಿತಿಗೆ ಹತ್ತಿರ ಇದ್ದವರಿಗೇ ಫಲ ದೊರಕುತ್ತದೆ; ಮಾತ್ರವಲ್ಲ, ಕೆಲವೊಮ್ಮೆ ಒಳಿತು ಮಾಡಿದವರಿಗೆ ಅವರ ಒಳ್ಳೆ ಕೆಲಸವೇ ಮುಳುವಾಗಬಹುದು.

